1) ಪಶ್ಚಿಮ ಘಟ್ಟ ಯೋಜನೆ:-

ವರ್ಷ	ಬಿಡುಗಡೆಯಾದ ಹಣ (ರೂ)	ವೆಚ್ಚ ಮಾಡಿದ ಹಣ(ರೂ)
98-99	90,000-00	90,000-00
99-2000	1,00,000-00	1,00,000-00
2000-01	-	-
ಒಟ್ಟು	1,90,000-00	1,90,000-00
2) ರಾಜ್ಯ ವಲಯ (ಮೊನುಗಾರಿಕೆ ಇಲಾಖೆ ಮತಿಯಿಂದ)		
98-99	1, 15, 765-00	1, 15, 765-00
99-2000	2, 11, 946-00	2, 11, 946-00
2000-01	2,03,404-00	2,03,404-00
ಒಟ್ಟು	5, 31, 115-00	5. 31. 115-00

ಭಾಲ್ಕಿ ತಾಲ್ಲೂಕಿನಲ್ಲಿ ರೋಗದಿಂದ ಕುರಿಗಳು ಸತ್ತಿರುವ ವಿಚಾರ.

1540(2203)

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಮತ ಕ್ಷೇತ್ರದಲ್ಲಿ ನವೆಂಬರ್ 98ರಲ್ಲಿ ರೋಗದಿಂದ ನರಳಿ ಕುರಿಗಳು ಸತ್ತ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದೆ? (ಸಂಪೂರ್ಣ ವಿವರಗಳನ್ನು ಒದಗಿಸುವುದು)

ಇ) ಸತ್ತಿರುವ ಕುರಿಗಳ ಮಾಲಕರಿಗೆ ಯಾವುದಾದರೂ ರೀತಿಯಲ್ಲಿ ಧನ ಸಹಾಯ ಮಾಡಲಾಗಿದೆಯೇ? ಮಾಡಲಾಗಿದ್ದರೆ ಪೂರ್ಣ ವಿವರಗಳನ್ನು ನೀಡುವುದು: ಮಂಜೂರು ಆಗದಿದ್ದರೆ ಸರ್ಕಾರವು ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ರೋಗದ ಕಾರಣದಿಂದ ಅಸ್ವಾಭಾವಿಕವಾಗಿ ಸತ್ತ ಬಗ್ಗೆ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾ ರಸ್ತೆಗಳು.

154 I(ಗಲಿಖಿ)

ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಉದ್ದ ಎಷ್ಟು? ನಿಡ್ಲೆ:ಕಯರ್ - ತಡ್ಕ:ಪಡಡುವೆಟ್ಟು: ನೆರಿಯ:ಕಕ್ಕಿಂಜೆ ರಸ್ತೆ ಸಂಚಾರಕ್ಕೆ ಯೋಗ್ಯವಾಗಿಲ್ಲದೆ ತೀರ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು:

2. ಮೇಲಿನ ರಸ್ತೆಯ ಪುತ್ಯ ಎಂಬಲ್ಲಿ ಸೇತುವೆ ಕೆಲಸವು ೧೯೯೩-೯೪ರಲ್ಲಿ ಪ್ರಾರಂಭವಾಗಿ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಅದನ್ನು ಸಕಾಲದಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ವ್ಯವಸ್ಥೆಗೊಳಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

3. ಈ ರಸ್ತೆಗೆ ಸೇರಿದ ನೆರಿಯ ಪುದುವಟ್ಟು ಎಂಬಲ್ಲಿ ಹೆಚ್‌ಪಿಸಿಎಲ್ ಪೈಪ್ ಲೈನ್‌ನಿಂದ ರಸ್ತೆ ಹಾಳಾಗಿ ಸಂಚಾರಕ್ಕೆ ತೊಡಕಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ: ಹಾಗಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):